ಗೆಳೆಯರೊಬ್ಬರನ್ನು ಈಚೆಗೆ ವಿವಾಹವೊಂದರಲ್ಲಿ ಸಂಧಿಸಿದೆ. ಕುಶಲವನ್ನು ರೂಢಿಯಂತೆ ವಿಚಾರಿಸಿದೆ. ಮಾತಿನ ನಡುವೆ 'ಹೇಗೆ ಬಂದಿರಿ' ಎಂದು ಕೇಳಿದೆ. ಅವರು ತನ್ನ ಕಾರಿನಲ್ಲಿ ಬಂದಿದ್ದರು. ನಾನು ಕಾರಿನಲ್ಲಿ ಬಂದೆ ಎಂದು ಹೇಳಿದ್ದರೆ, ಅದು ಅಸಹಜವೆನ್ನಿಸುತ್ತಿರಲಿಲ್ಲ. ಅದರಲ್ಲೇನು ವಿಶೇಷವಿರುತ್ತಿರಲಿಲ್ಲ. ಆದರೆ ಅವರು ಕೊಟ್ಟ ಉತ್ತರ ವಿಶೇಷವಾಗಿತ್ತು. 'ಏ ಬಸ್ಸೆಲ್ಲ ಯಾರು ಕಾಯ್ತಾರೆ ಮಾರಾಯ್ರೆ. ಅಯ್ಯೋ ಬಸ್ಸು ಹತ್ತಿ ಬರುವಷ್ಟು ಪುರುಸೊತ್ತು ಎಲ್ಲುಂಟು' ಎಂದರು. ಐದೈದು ನಿಮಿಷಕ್ಕೆ ಒಂದೊಂದು ಬಸ್ಸು ಇರುವ ಊರದು. ಅವರ ಮನೆಯಿಂದ ನಾಲ್ಕಾರು ಹೆಜ್ಜೆ ದೂರದಲ್ಲಿ ಬಸ್ ನಿಲ್ದಾಣವಿತ್ತು. ಆ ಮಹಾಶಯರಿಗೆ ಐದು ನಿಮಿಷ ಕಾಯುವುದು ಮಹಾಸಂಕಟದಂತೆ ತೋರಿದೆ. ವಿವಾಹದಲ್ಲಿಯು ನೆಮ್ಮದಿಯಿಂದ ಕುಳಿತವರಲ್ಲ. ಅರೆಕ್ಷಣಕ್ಕೊಮ್ಮೆ ಕೈಯಲ್ಲಿರುವ ವಾಚನ್ನು, ಮೊಬೈಲ್‌ನ್ನು ದಿಟ್ಟಿಸುತ್ತಲೇ ಚಡಪಡಿಸುತ್ತಿದ್ದರು. ಅವರ ಚಡಪಡಿಕೆಯನ್ನು ಕಂಡು 'ಎಲ್ಲಿಗಾದರು ಹೋಗಲಿತ್ತೆ?' ಎಂದು ಪ್ರಶ್ನಿಸಿದೆ. 'ಹೆ ಎಲ್ಲು ಇಲ್ಲ' ಎಂದು ನಕ್ಕರು. ಅವರ ಆವೇಗ ಚಡಪಡಿಕೆ ಚೂರೂ ತಗ್ಗಲಿಲ್ಲ. ಯಾವ ಧಾವಂತ ಇಲ್ಲದೆಯೂ ಇವರು ಅವಸರದ ಮೂಟೆಯನ್ನು ಬೆನ್ನಿಗಿಟ್ಟುಕೊಂಡವರು. ಇದು ಒಬ್ಬರ ಸ್ಥಿತಿಯಲ್ಲ ನಮ್ಮೆಲ್ಲರ ಬದುಕಿನ ನಡೆಯೂ ಹೌದು.

ನಾನು ಹಿಂದೆ ಕಾರ್ಯನಿರ್ವಹಿಸಿದ ಕಾಲೇಜಿನ ಆವರಣದಲ್ಲಿ ನಡೆದ ಘಟನೆಯಿದು. ಎಂದಿನಂತೆ ಸಂಜೆ ಶಾಲೆ ಮುಗಿದ ನಂತರ ಮಕ್ಕಳು ಬ್ಯಾಗು ಹೆಗಲೇರಿಸಿ ಮನೆಗೆ ಹೋದರು. ತರಗತಿ ಕೋಣೆಯ ಬೀಗ ಹಾಕಲು ಬಂದ ಸಹಾಯಕನು ಎಂದಿನ ರೂಢಿಯಂತೆ ಕೋಣೆಯೊಳಗೊಮ್ಮೆ ಇಣುಕಿ ಬೀಗ ಹಾಕಿ ಹೋದ. ಸಂಜೆ ಮನೆಗೆ ಹೋಗುವ ಧಾವಂತದ ವಶಕ್ಕೊಳಗಾದ ಅವನ ದಿಟ್ಟಿಗೆ ಕೋಣೆಯ ಮೂಲೆಯಲ್ಲಿ ಬೆಂಚಿಗೆ ಹಣೆಕೊಟ್ಟು ಮಲಗಿದ ವಿದ್ಯಾರ್ಥಿನಿ ಕಂಡಿಲ್ಲ. ಆ ಮಗು ಎಚ್ಚರವಾಗಿ ಕಣ್ಣುಬಿಟ್ಟರೆ ಕೋಣೆಯ ತುಂಬೆಲ್ಲ ಕತ್ತಲೆ ತುಂಬಿದೆ. ಮಕ್ಕಳಾರು ಇಲ್ಲ. ಬಾಗಿಲಿಗೆ ಬೀಗ ಹಾಕಿದೆ. ಭೀತಿಯಲ್ಲಿ ಬೊಬ್ಬೆ ಹಾಕಿದೆ. ಆ ಮಗುವಿನ ಪುಣ್ಯಕ್ಕೆ ಶಾಲೆ ಊರ ನಡುವೆಯಿತ್ತು. ಆ ಕೋಣೆಗೆ ತಾಗಿ ರಸ್ತೆಯಿತ್ತು. ಕಿಟಕಿಯಿಂದ ಹೊರಬಿದ್ದ ಕೂಗು ದಾರಿಹೋಕರ ಕಿವಿಗೆ ಬಿದ್ದು ಸಹಾಯಕ್ಕೆ ಧಾವಿಸಿದ್ದಾರೆ. ಇಂದಿನ ದೃಶ್ಯ ಮಾಧ್ಯಮಗಳ ಕಣ್ಣಿಗೆ ಈ ಘಟನೆ ಬೀಳದ್ದರಿಂದ ಅಲ್ಲಿನ ಸಿಬ್ಬಂದಿ ಬಚಾವಾದರು. ಇಂತಹ ಅನೇಕ ಘಟನೆಗಳು ನಮ್ಮ ಬದುಕಿನ ದಾರಿಯಲ್ಲಿ ಹಾದುಹೋಗಿವೆ. ಇವೆಲ್ಲವು ಕೆಲವು ಬಿಡಿ ಘಟನೆಗಳಲ್ಲ. ಇವು ಇಂದಿನ ಅವಸರದ ಬದುಕಿಗೆ ಹಿಡಿದ ಕನ್ನಡಿಯಂತಿವೆ.

ಜೀವನದ ಸರ್ವರಂಗವು ರೇಸಿಗೆ ನಿಂತ ಓಟಗಾರ/ಗಾರ್ತಿಯಂತೆ ಸಿದ್ಧವಾಗಿವೆ. ಈ ಯುಗಧರ್ಮದ ವೇಗಕ್ಕೆ ಬೆನ್ನುಹಾಕಿ ಸಾಗುವ ಕ್ರಿಯೆ ಸುಲಭವಾದದ್ದಲ್ಲ. ಇದು ಪ್ರವಾಹದ ವಿರುದ್ಧ ಈಜುವ ದಿಟ್ಟತನ ತೋರುವ ಸಾಹಸದಂತೆ. ತಾಳ್ಮೆ, ಸಾವಧಾನ ಬೆನ್ನಿಗಿರಿಸಿಕೊಂಡು ಸಾಗುವವರು ಈ ಕಾಲಕ್ಕೆ ಅಪ್ರಸ್ತುತರಂತೆ, ಮತಿಗೇಡಿಗಳಂತೆ ಕಾಣುವ ಸನ್ನಿವೇಶವ ನಿರ್ಮಿತವಾಗಿದೆ. ಸಾವಧಾನ ಹೊಂದಿ ಸಾಗುವ ಸಾಹಸಿಗಳು ಇಲ್ಲವೆ ಇಲ್ಲ ಎಂದಂತಲ್ಲ. ಅವರ ಸಂಖ್ಯೆ ವಿರಳವಾಗಿದೆ. ಕಾಲಪಥಕ್ಕೆ ಅನುಸಾರವಾಗಿ ಹೆಜ್ಜೆ ಹಾಕುವುದು ವಿವೇಕದ ನಡೆಯಾಗಿದೆ. ಇದು ಸೋಪಜ್ಞತೆಯಿಲ್ಲದ ಕುರುಡು ಅನುಸರಣೆ ಎಂದು ಮೂಗು ಮುರಿಯುವುದು ಸಲ್ಲ. ಇಂದು ಅವಸರವು ಜೀವನದ ಗುಣಾತ್ಮಕ ಮೌಲ್ಯಗಳಲ್ಲಿ ಒಂದಾಗಿದೆ. ಹಿಂದೆಲ್ಲ ಕೃಷಿಯಲ್ಲಿ ವರ್ಷಕ್ಕೆ ಎರಡೇ ಬೆಳೆ ತೆಗೆಯುವುದು ಸಾಮಾನ್ಯವಾಗಿತ್ತು. ಇಂದು ನಾಲ್ಕು ಬೆಳೆ ಬೆಳೆಯುವ ಹಂತಕ್ಕೆ ಬದಲಾಗಿದೆ. ನೈಸರ್ಗಿಕವಾದ ಪಾರಂಪರಿಕ ಬೇಸಾಯದ ಕ್ರಮಗಳಿಗೆ ಜೋತುಬಿದ್ದರೆ ಅರೆಹೊಟ್ಟೆ ಗತಿಯಾದೀತು. ಇಂದೇನು ಮೃಷ್ಟಾನ್ನ ಸಿಗುತ್ತಿದೆ ಎಂದಲ್ಲ. ಬದುಕಿನ ಸ್ಥಿತಿಯನ್ನು ಒಂಚೂರಾದರೂ ಸುಧಾರಿಸುತ್ತದೆ ಎಂಬ ನಂಬುಗೆಯಲ್ಲಿ ನಮ್ಮ ರೈತರು ಆಧುನಿಕ ಕೃಷಿಯ ಹಿಂದೆ ಬಿದ್ದಿದ್ದಾರೆ.

ಇಂದಿನ ತಂತ್ರಜ್ಞಾನ ಯುಗ ಸೃಜಿಸಿದ ಬದುಕಿನ ಸ್ವರೂಪದಲ್ಲಿದೆ. ತಂತ್ರಜ್ಞಾನದ ಬಳಕೆ ವಿಪರೀತ ಹೆಚ್ಚುತ್ತಿದಂತೆ ನಮ್ಮ ಜೀವನವು ಯಾಂತ್ರಿಕತೆಯ ಕಪಿಮುಷ್ಟಿಗೆ ಸಿಲುಕಿತು. 'ಓಡು ಅವರಿವರ ತಳ್ಳು ಮುನ್ನುಗ್ಗು/ಎಲ್ಲಾದರು ಸರಿಯೆ ಬೇರೂರು ಹೀರು' ಎಂಬ ಜಿ.ಎಸ್. ಶಿವರುದ್ರಪ್ಪನವರ ಸಾಲುಗಳು ಈ ಯಾಂತ್ರಿಕ ಬದುಕಿನ ಪ್ರತಿಫಲನದಂತಿಲ್ಲವೆ? ಅವರಿವರ ತಳ್ಳಿ ಮುನ್ನುಗ್ಗುವ ಛಾತಿ ಇಂದಿನ ನಗರ ಬದುಕಿಗೆ ಅಗತ್ಯವಾದ ಮೌಲ್ಯವಾಗಿದೆ. ಅವರಿವರ ತಳ್ಳುವುದು ಅನೈತಿಕವಾದುದೇನಲ್ಲ. ತಾನು ಬೇರೂರಲು ಅನುಸರಿಸಬೇಕಾದ ಮಾರ್ಗವಾಗಿ ಗೋಚರಿಸಿದೆ. ಇಲ್ಲಿ ನೈತಿಕ ಅನೈತಿಕತೆಯ ಕಟ್ಟಿಲ್ಲ. ಅವಸರದ ಯಾಂತ್ರಿಕ ಬದುಕು ಸೃಷ್ಟಿಸುವ ಆತಂಕವೆಂದರೆ, ಪರಸ್ಪರ ಸ್ವಾರ್ಥಿಗಳೇ ತುಂಬಿದ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳಿಗೆ ಬೇರೂರಲು ನೆಲವೇ ಇರುವುದಿಲ್ಲ.

ಸಾವಧಾನದ ಜೀವನ ಲಯಕ್ಕೆ ಮಾತ್ರ ತನ್ನೊಟ್ಟಿಗೆ ಎಲ್ಲರನ್ನು ಕರೆದ್ಯೊಯ್ಯುವ ಗುಣವಿರುತ್ತದೆ. ಆಧುನಿಕ ಯಾಂತ್ರಿಕತೆಯ ದಾಸ್ಯ ಮಾನವನ ಅಂತಃಸತ್ವವನ್ನು ಹೀರಿ ನಿಸ್ಸಾರಗೊಳಿಸುತ್ತವೆ ಎಂಬ ಕಳಕಳಿಯಿಂದ ಮಹಾತ್ಮ ಗಾಂಧೀಜಿಯವರು ಅಂದು ಮಂಡಿಸಿದ ಚಿಂತನೆ, ವಿಚಾರಗಳ ಪ್ರಸ್ತುತತೆ ಇಂದು ನಮಗೆ ಅರ್ಥವಾಗುತ್ತಿದೆ. ಸಾವಧಾನ ಬದುಕಿನ ಅಗತ್ಯವನ್ನು ಗಾಂಧೀಜಿಯವರು ಒತ್ತಿ ಹೇಳಿದರು. ಇದು ಕಾಲವನ್ನು ಹಿಂದಕ್ಕೆ ಎಳೆದ್ಯೊಯುವ ಪ್ರಯತ್ನವಾಗಿ ಕಂಡವು. ಈ ಚಿಂತನೆಗೆ ದೊಡ್ಡ ಪ್ರಮಾಣದ ವಿರೋಧವು ಆ ಕಾಲದ ಸಮಾಜದಿಂದ ಬಂದಿತು. ಜಗತ್ತು ಎಷ್ಟೇ ವೇಗವಾಗಿ ಸಾಗುತ್ತಿದ್ದರು, ನಮ್ಮ ಸುತ್ತಲಿನ ನಿಸರ್ಗದ ದೈನಿಕ ಕ್ರಿಯೆಗಳನ್ನು ಪಲ್ಲಟಿಸಲು ಸಾಧ್ಯವಾಗಿಲ್ಲ ಎಂಬ ಸಮಾಧಾನ ನಮಗಿದೆ. ಸೂರ್ಯನ ಚಲನೆಯಾಗಲಿ, ಋತುಮಾನದ ಬದಲಾವಣೆಯಾಗಲಿ ವೇಗದ ಆಕರ್ಷಕತೆಗೆ ಮಾರುಹೋಗಿಲ್ಲ. ಅದರ ಎಂದಿನ ಲಯದಲ್ಲಿ ಅಗಾಧವಾದ ಏರುಪೇರಾಗಿಲ್ಲ. ಮನುಷ್ಯ ಸಂಕುಲ ಎಷ್ಟೇ ವೇಗವನ್ನು ಬೆನ್ನಟ್ಟಿ ಹೊರಟಿದ್ದರೂ ನಮ್ಮ ಜೈವಿಕ ಗಡಿಯಾರದಲ್ಲಿ ವ್ಯತ್ಯಾಸವೇನಾಗಿಲ್ಲ. ತಾಯ ಗರ್ಭದಲ್ಲಿರುವ ಮಗು ಹೊರ ಪ್ರಪಂಚಕ್ಕೆ ಕಾಲಿಡಲು ಒಂಬತ್ತು ತಿಂಗಳು ಕಾಯಬೇಕು. ಇದಕ್ಕೆ ಕೆಲವು ಅಪವಾದಗಳಿರಬಹುದು. ಆದರೆ ನವಮಾಸದ ಚಕ್ರ ಸಾಮಾನ್ಯವಾಗಿದೆ. ತಾಯ ಗರ್ಭದಿಂದ ಹೊರಬರುವಾಗ ಇರದ ಗಡಿಬಿಡಿ ಇಂದಿನ ಬದುಕಿಗೆ ಅಗತ್ಯವಿಲ್ಲ ಎಂಬ ವಿವೇಕ ಅಂತರಂಗದಲ್ಲಿ ಮೂಡಲಿ ಎಂದು ಆಶಿಸಬೇಕಷ್ಟೆ.

ನಮ್ಮ ಸಾಂಪ್ರದಾಯಿಕ ಜೀವನದ ಲಯಗಳು ಗ್ರಾಮೀಣ ಬದುಕಿನಲ್ಲಿ ಮುಕ್ಕಾಗಿಲ್ಲ. ಹೊಲದಲ್ಲಿ ಉಳುಮೆ ಮಾಡಲು ಹೊರಟ ಕೃಷಿಕ ಎದುರು ಸಿಕ್ಕು ಮಾತನಾಡಿಸಿದವರ ಜೊತೆ ಕೆಲವು ನಿಮಿಷಗಳಾದರೂ ನಿಂತು ಸಂಭಾಷಿಸದೆ ಮುನ್ನಡೆಯಲಾರ. ನಮ್ಮ ಹಳ್ಳಿಗಳು ಎಷ್ಟೇ ಬದಲಾವಣೆಗೆ ಒಳಗಾದರೂ ಸಾವಧಾನದ ಬದುಕಿನ ಕುರುಹುಗಳು ಇಂದಿಗೂ ಹಾಸುಹೊಕ್ಕಾಗಿ ಗೋಚರಿಸುವಂತಿವೆ. ಅಲ್ಲಿಯು ವೇಗದ ಚಲನೆಯ ಕಣ್ಣೋಟ ಸಿಗಲಾರವೆಂದಲ್ಲ, ಆದರೆ ಬದುಕಿನ್ನು ತಣ್ಣಗೆ ಹರಿಯುವ ವೈಶಾಖದ ನದಿಯ ಚಲನೆಯಂತಿದೆ. ಅವರು ಧಾವಂತದಲ್ಲಿ ಓಡಿ ತಲುಪಬೇಕಾದ ಗಮ್ಯಗಳಿಲ್ಲ. ತಮ್ಮ ದಾರಿ ಕಣ್ಣೆದುರು ಇದೆ. ಆ ಗಮ್ಯ ತಲುಪಲು ಸಾವಧಾನದ ನಡಿಗೆ ಯುಕ್ತವೆಂಬ ದೃಷ್ಟಿ ಅಲ್ಲಿನ ಹಿರಿಯ ತಲೆಮಾರಿನಲ್ಲಿದೆ.

